**ಓ ಎಸ್ 9/2021 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 12.06.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಕೆ ಹೆಚ್ ಆರ್ ವಕೀಲರ ಪರವಾಗಿ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

ನಮ್ಮ ತಂದೆಯು ಎಷ್ಟು ಕೇಸುಗಳನ್ನು ಯಾರ ಯಾರ ಮೇಲೆ ಹಾಕಿದ್ದಾರೆ ಎಂಬುದನ್ನು ತಿಳಿದುಕೊಂಡಿದ್ದೇನೆ. ನಮ್ಮ ತಾತನ ಆಸ್ತಿಗಳಿಗೆ ಸಂಬಂಧಿಸಿದಂತೆ ಏನೇನು ವ್ಯವಹಾರ ನಡೆದಿದೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಈ ಕೇಸನ್ನು ಹೊರತುಪಡಿಸಿ ನಮ್ಮ ತಂದೆಯ ಬೇರೆ ಕೇಸುಗಳ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ 3 ಜನ ಮಕ್ಕಳು. ಅವರ ಹೆಸರುಗಳು ರಜನಿ, ನಾನು ಭವ್ಯ, ನನ್ನ ತಂಗಿ ತುಳಸಿ. ನಾನು, ನನ್ನ ತಂದೆ, ಹಾಗೂ ನನ್ನ ಅಕ್ಕ ತಂಗಿಯರು ಚೆನ್ನಾಗಿದ್ದೇವೆ. ನನ್ನ ತಂಗಿ ತುಳಸಿ ನನ್ನ ತಂದೆ ಮೇಲೆ ಕೇಸು ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 86/2014 ನನ್ನ ತಂಗಿ ತುಳಸಿಯು ನನ್ನ ತಂದೆ, ನನ್ನ ಅಕ್ಕ ರಜಿನಿ ಹಾಗೂ ಇತರರ ವಿರುದ್ಧ ಪಾಂಡವಪುರದ 2 ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯದಲ್ಲಿ ಹೂಡಿದ್ದ ಸಂಗತಿ ನನಗೆ ಗೊತ್ತಿಲ್ಲ. ಆ ಕೇಸಿನಲ್ಲಿ ನನ್ನ ತಂದೆಯೇ ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ತನ್ನ ತಂದೆಗೆ ಉಷಾರಿಲ್ಲ ಎಂದು ಹೇಳುತ್ತಾರೆ. ಆ ಕೇಸಿನಲ್ಲಿ ಯಾರು ಹಾಜರಾಗುತ್ತಿದ್ದರು ಎಂದು ನನ್ನ ಬಳಿ ನನ್ನ ತಂದೆ ಚರ್ಚೆ ಮಾಡಿಲ್ಲ. ಪಾಂಡವಪುರದ ಪ್ರಧಾನ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯದಲ್ಲಿ ಎಲ್ ಎ ಸಿ ಸಂಖ್ಯೆ 4/2013 ನ್ನು ನನ್ನ ತಂದೆಯೇ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ನ್ಯಾಯಾಲಯದಲ್ಲಿ ಅಮಲ್ಜಾರಿ ಅರ್ಜಿ ಸಂಖ್ಯೆ 27/2021 ನ್ನು ನನ್ನ ತಂದೆಯೇ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನ್ನ ತಂದೆಯೇ ಖುದ್ದಾಗಿ ಹಾಜರಾಗಿ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ಈ ದಾವೆಯಲ್ಲಿ ಖುದ್ದಾಗಿ ಹಾಜರಾಗಿ ಸಾಕ್ಷ್ಯ ನುಡಿದರೆ ಸತ್ಯ ಸಂಗತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ

ಎಂಬ ಕಾರಣದಿಂದ ನನ್ನ ಮೂಲಕ ಸಾಕ್ಷ್ಯನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಾತನಿಗೆ ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಪಾಂಡವಪುರ ಹಾಗೂ ಚಂದ್ರೆ ಗ್ರಾಮದಲ್ಲಿ ಆ ಆಸ್ತಿಗಳು ಇವೆ ಎಂದು ಹೇಳುತ್ತಾರೆ. ಆಸ್ತಿಗಳನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆ. ಸಿ ಕೆ ದೇವೇಗೌಡ, ವೆಂಕಟೇಶ್, ನಾಗರಾಜು ಮತ್ತು ತಂದೆ ತಾಯಿ ಭಾಗ ಮಾಡಿಕೊಂಡಿದ್ದಾರೆ. ಆ ವಿಭಾಗದಲ್ಲಿ ನನ್ನ ತಂದೆಗೆ ಚಂದ್ರೆ ಮತ್ತು ಪಾಂಡವಪುರ ಎರಡು ಕಡೆ ಭಾಗ ಬಂದಿದೆ. ಹಾಗೆ ಭಾಗ ಬಂದಿರುವ ಆಸ್ತಿಗಳ ವಿವರಗಳು ನನಗೆ ಗೊತ್ತಿಲ್ಲ. ಆ ವಿಭಾಗದ ಆಧಾರದ ಮೇಲೆ ನನ್ನ ತಂದೆ ಹೆಸರಿಗೆ ಖಾತಾ ಬದಲಾವಣೆ ಆಗಿದೆ. ಯಾವ ಆಧಾರದ ಮೇಲೆ ಅವರುಗಳ ಹೆಸರುಗಳಿಗೆ ಖಾತಾ ಬದಲಾವಣೆ ಆಗಿದೆ ಎಂದು ನನಗೆ ಗೊತ್ತಿಲ್ಲ. ವಿಭಾಗವಾಗಿ ಸುಮಾರು 35 ರಿಂದ 40 ವರ್ಷಗಳಾಗಿವೆ. ಸದರಿ ವಿಭಾಗವು ಮೌಖಿಕವಾಗಿ ಆಗಿರದೆ ಪಂಚಾಯಿತಿ ಪಾಲುಪಟ್ಟಿ ಮೂಲಕ ಆಗಿದೆ ಎಂದರೆ ಸರಿಯಲ್ಲ.

ನನ್ನ ತಂದೆ ವಿದ್ಯಾಭ್ಯಾಸ ಮಾಡಿಲ್ಲ. ಅವರಿಗೆ ಅವರ ಹೆಸರು ಬರೆಯುವುದನ್ನು ಬಿಟ್ಟು ಬೇರೆ ಏನು ಬರುವುದಿಲ್ಲ. ನನಗೆ ಬುದ್ದಿ ಬಂದಾಗಿನಿಂದಲೂ ನನ್ನ ತಂದೆ ಸಹಿ ಮಾಡುತ್ತಾರೆ. ಸುಮಾರು 2000 ರಿಂದ ಈಚೆಗೆ ನನ್ನ ತಂದೆ ಸಹಿ ಮಾಡುವುದನ್ನು ಕಲಿತಿದ್ದಾರೆ ಎಂದರೆ ಸರಿಯಲ್ಲ. ಅದಕ್ಕೆ ಮೊದಲು ಅವರು ಹೆಬ್ಬೆಟ್ಟಿನ ಗುರುತನ್ನು ಮಾತ್ರ ಹಾಕುತ್ತಿದ್ದರು ಎಂದರೆ ಸರಿಯಲ್ಲ. ಚಂದ್ರೆ ಮತ್ತು ಪಾಂಡವಪುರದ ಆಸ್ತಿಗಳನ್ನು ಒಂದೇ ಬಾರಿ ವಿಭಾಗ ಮಾಡಿಕೊಂಡರು. ಆ ಆಸ್ತಿಗಳನ್ನು ದಿನಾಂಕ 17.08.1984 ರಂದು ಪಂಚಾಯಿತಿ ಪಾಲುಪಟ್ಟಿ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯಿತಿ ಪಾಲುಪಟ್ಟಿಗೆ ನನ್ನ ತಾತ, ಅಜ್ಜಿ, ನನ್ನ ತಂದೆ, ನಾಗರಾಜು, ಸಿ ಕೆ ದೇವೇಗೌಡ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಯಾರ ಯಾರ ಭಾಗಕ್ಕೆ ಯಾವ ಯಾವ ಆಸ್ತಿಗಳು ಹೋದವೋ ಅವುಗಳ ಖಾತೆಯನ್ನು

ಸದರಿ ಪಾಲುಪಟ್ಟಿ ಆಧಾರದ ಮೇಲೆ ಬದಲಾವಣೆ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿಗೆ ಆಸ್ತಿಗಳ ಖಾತೆ ಹೇಗೆ ಬದಲಾವಣೆ ಆಗಿವೆ ಎಂಬ ಸಂಗತಿಯನ್ನು ದಾಖಲೆಗಳನ್ನು ಪರಿಶೀಲಿಸಿ ತಿಳಿದುಕೊಂಡಿಲ್ಲ.

ನನ್ನ ತಂದೆಯು ಏನೆಂದು ಈ ದಾವೆಯನ್ನು ಹೂಡಿದ್ದಾರೆ ಎಂಬುದನ್ನು ತಿಳಿದುಕೊಡಿದ್ದೇನೆ. ಈ ದಾವೆಯಲ್ಲಿ ಪ್ರತಿವಾದಿಗಳು ಏನು ಪ್ರತಿವಾದ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಚಂದ್ರೆ ಗ್ರಾಮದ ಮಂಗಳೂರು ಹೆಂಚಿನ ಮನೆ, ಸರ್ವೆ ನಂ. 86/1, 87/2 ಹಾಗೂ 88/1 ರಲ್ಲಿನ ಜಮೀನುಗಳು ಮತ್ತು ಸಂಕನಹಳ್ಳಿಯ ಸರ್ವೆ ನಂ. 41 ರಲ್ಲಿ ಜಮೀನು ನಮ್ಮ ತಂದೆಯ ಪಾಲಿಗೆ ಬಂದಿವೆ ಎಂದರೆ ಸರಿ. ಚಂದ್ರೆ ಗ್ರಾಮದ ಮಂಗಳೂರು ಹೆಂಚಿನ ಮನೆಯನ್ನು 15.02.2001 ರಲ್ಲಿ ಮಂಜುನಾಥ ಎಂಬುವವರಿಗೆ ನಾನು, ನನ್ನ ತಂದೆ, ನನ್ನ ಅಕ್ಕ ತಂಗಿಯರು ಸೇರಿಕೊಂಡು ಮಾರಾಟ ಮಾಡಿದ್ದೇವೆ ಎಂದರೆ ಸರಿ. ದಿನಾಂಕ 25.05.2001 ರಂದು ಸಂಕನಹಳ್ಳಿ ಗ್ರಾಮದ ಸರ್ವೆ ನಂ. 41 ರಲ್ಲಿನ ಜಮೀನನ್ನು ಚಂದ್ರೆ ಗ್ರಾಮದ ದೇವೇಗೌಡರ ಹೆಂಡತಿ ಸುಶೀಲಾ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ದಿನಾಂಕ 15.11.2010 ರಂದು ಚಂದ್ರೆ ಗ್ರಾಮದ ಸರ್ವೆ ನಂ. 86/1 ರಲ್ಲಿನ ಜಮೀನನ್ನು ಚಂದ್ರೆ ಗ್ರಾಮದ ರಾಮೇಗೌಡರ ಹೆಂಡತಿ ರಾಜಮ್ಮ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ದಿನಾಂಕ 17.08.1984 ರ ಪಾಲುಪಟ್ಟಿಯಲ್ಲಿ ನನ್ನ ಅಜ್ಜ ಮತ್ತು ಅಜ್ಜಿಗೆ ಯಾವ ಯಾವ ಆಸ್ತಿಗಳನ್ನು ನೀಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಅಂತಹ ಯಾವುದೇ ಪಾಲುಪಟ್ಟಿ ಆಗಿಲ್ಲ. ದಿನಾಂಕ 17.09.1984 ರ ಪಾಲುಪಟ್ಟಿ ಪ್ರಕಾರ ಪಾಂಡವಪುರ ಟೌನ್ ಚಿಕ್ಕ ಮಸೀದಿ ಬೀದಿಯಲ್ಲಿರುವ ಮದ್ರಾಸ್ ಆರ್ ಸಿ ಸಿ ಮತ್ತು ಮಂಗಳೂರು ಹೆಂಚಿನ ಮನೆ ಹಾಗೂ ಹಿರೋಡೆ ಗ್ರಾಮದ ಸರ್ವೆ ನಂ. 75 ರಲ್ಲಿ 0.41 ಏರಸ್ ಮತ್ತು ಸರ್ವೆ ನಂ. 72 ರಲ್ಲಿ 0.31 ಏರಸ್ ಮತ್ತು ಸರ್ವೆ ನಂ. 72 ರಲ್ಲಿ

0.06 ಏರಸ್ ಆಸ್ತಿಗಳು ನನ್ನ ತಾತ ಮತ್ತು ಅಜ್ಜಿ ಪಾಲಿಗೆ ಹೋಗಿವೆ ಎಂದರೆ ಸದರಿ ಆಸ್ತಿಗಳು ನನ್ನ ಅಜ್ಜಿ ತಾತನ ಪಾಲಿಗೆ ಹೋಗಿರುವುದು ನಿಜ ಆದರೆ ಹಾಗೆ ಪಾಲುಪಟ್ಟಿಯ ಮೂಲಕ ಹೋಗಿರದೆ ಮೌಖಿಕ ವಿಭಾಗದ ಮೂಲಕ ಹೋಗಿದೆ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**